**ಓ ಎಸ್ ನಂಃ 455-14**
**ಪಿ ಡಬ್ಲ್ಯೂ ಃ 2**

**ದಿಃ 13-07-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಜಿ.ಪಿ ವಕೀಲರಿಂದ**

ನನ್ನ ತಾಯಿ ಹೆಸರು ಚೌಡಮ್ಮ, 1 ನೇ ವಾದಿ ಈರಮ್ಮ ರವರು ನ್ಯಾಯಾಲಯಕ್ಕೆ ಬರುತ್ತಿದ್ದರು, ಅವರಿಗೆ ಸುಮಾರು 75 ವರ್ಷ ವಯಸ್ಸಾಗಿದೆ ಅಂದರೆ ಸಾಕ್ಷಿ ಅವರಿಗೆ ಸುಮಾರು 55 ವರ್ಷ , ನನ್ನ ತಾಯಿಗೆ 50 ವರ್ಷ ವಯಸ್ಸಾಗಿದೆ, 3 ನೇ ವಾದಿಗೆ 47-48 ವರ್ಷ ವಯಸ್ಸಾಗಿದೆ, ವಾದಿಗಳು ಶಾಲೆಗೆ ಹೋಗಿದ್ದಾರೆಂದು ನನಗೆ ಗೊತ್ತಿಲ್ಲ, 1 ನೇ ವಾದಿ 1 ನೇ ಪ್ರತಿವಾದಿಯ ತಂಗಿ, ಈರಮ್ಮ ರವರು ಈ ನ್ಯಾಯಾಲಯಕ್ಕೆ ಬಂದು ಪ್ರಮಾಣ ಪತ್ರವನ್ನು ಹಾಕಿದ್ದರು, ಅವರು ಮಾತನಾಡುತ್ತಾರೆ ಆದರೆ ಅವರು ಬಚ್ಚಲು ಮನೆಯಲ್ಲಿ ಬಿದ್ದು ಸೊಂಟಕ್ಕೆ ಏಟಾಗಿದ್ದ ಕಾರಣ ಓಡಾಡಲು ಆಗುವುದಿಲ್ಲ ಎಂದು ಹೇಳುತ್ತಾರೆ, 1 ನೇ ವಾದಿಗೆ ಸುಮಾರು 5-6 ವರ್ಷಗಳಿಂದ ಏಟಾಗಿತ್ತು, ಅವರು ತಾವರೆಕೆರೆಯಲ್ಲಿರುವ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ, ಅವರಿಗೆ ಏಟಾಗಿದ್ದ ಬಗ್ಗೆ ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ, ನಮ್ಮ ಅಮ್ಮ 2 ನೇ ವಾದಿ ಹಾಗೂ 3 ನೇ ವಾದಿ ಸಹ ಮಾತನಾಡುತ್ತಾರೆ ಮತ್ತು ಓಡಾಡುತ್ತಾರೆ, ನನ್ನ ತಾಯಿ ಈ ನ್ಯಾಯಾಲಯಕ್ಕೆ ಯಾವತ್ತೂ ಸಹ ಬಂದಿಲ್ಲ ಅಂದರೆ ಸರಿಯಲ್ಲ, ನನ್ನ ಅಮ್ಮ ಮತ್ತು ಚಿಕ್ಕಮ್ಮ ಅಧಿಕಾರ ಕೊಟ್ಟಿದ್ದಾರೆ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ, ನನ್ನ ಅಮ್ಮ ಮತ್ತು ಚಿಕ್ಕಮ್ಮ ನ್ಯಾಯಾಲಕಯಕ್ಕೆ ಬಂದು ಸಾಕ್ಷಿ ಹೇಳಬಹುದು ಅಂದರೆ ಸರಿಯಲ್ಲ, ಅವರು ನನಗೆ ಅಧಿಕಾರ ಕೊಟ್ಟಿಲ್ಲ ಅಂದರೆ ಸರಿಯಲ್ಲ, ನನಗೆ 1 ನೇ ವಾದಿಯವರು 3-4 ವರ್ಷದ ಹಿಂದೆ ಅಧಿಕಾರ ಪತ್ರ ಕೊಟ್ಟಿದ್ದರು, ನಿಪಿ 33 ನ್ನು ಕೊಟ್ಟಾಗ ವಾದಿಗಳು ಮಾಗಡಿಗೆ ಬಂದಿದ್ದರು,
(ಸಾಕ್ಷಿಯು ನ್ಯಾಯಾಲಯದಲ್ಲಿ ಕೇಳಿದ ಪ್ರಶ್ನೆಗಳಿಗೆ ಅವರ ವಕೀಲರನ್ನು ಕೇಳಿಕೊಂಡು ಉತ್ತರ ನೀಡಿರುತ್ತಾರೆ ಹಾಗೂ ಯಾವುದೇ ಪ್ರಶ್ನೆಗೆ ಸರಿಯಾದ ಉತ್ತರ ನೀಡಲು ನಿರಾಕರಿಸಿರುತ್ತಾರೆ, ಆದಕಾರಣ ಸಾಕ್ಷಿಗೆ ಪಾಟೀ ಸವಾಲನ್ನು ದಂಡ ಸಮೇತ ಮುಂದೂಡಲಾಯಿತು.)

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**